ಬೈಗುಳಗಳೊಂದಿಗೆ ಸಾಣೆ ಹಿಡಿದು ಮತ್ತಷ್ಟು ಹರಿತ ಮಾಡಿಕೊಂಡಳು. ತನ್ನೊಂದಿಗೆ ಬಾಲಬಿಚ್ಚುವವರ ಜನ್ಮವನ್ನು ಎಲ್ಲರೆದುರೇ ಜಾಲಾಡುತ್ತಿದ್ದಳು. ಅವಳು ಬೆಂಕಿಯೆಂದು ಗೊತ್ತಾದ ಮೇಲೆ ಅವಳನ್ನು ಕೆಣಕುವ ಸಾಹಸ ಯಾರೂ ಮಾಡಲಿಲ್ಲ. ರಂಗಮ್ಮ ತನ್ನ ಜೀವನವನ್ನು ಮಗಳಿಗಾಗಿ ಮುಡುಪಾಗಿಟ್ಟಳು. ಒಬ್ಬಳೇ ಮಗಳನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿಕೊಳ್ಳುತ್ತಾ, ವಿದ್ಯಾಭ್ಯಾಸ ಮಾಡಿಸತೊಡಗಿದಳು.

ಸೌಮ್ಯ ಓದಿನಲ್ಲಿ ಮೊದಲಿನಿಂದಲೂ ಜಾಣೆಯಾಗಿದ್ದಳು. ಊರಿನಲ್ಲಿಯೇ ಇದ್ದ ಶಾಲೆಯಲ್ಲಿ ಪ್ರಾಥಮಿಕ, ಮಾಧ್ಯಮಿಕ ಶಾಲೆ ಮುಗಿಸಿ, ಹೈಸ್ಕೂಲಿಗೆ ಹತ್ತು ಕಿಲೋಮೀಟರ್ ದೂರದ ತಾಲ್ಲೂಕು ಕೇಂದ್ರಕ್ಕೆ ಸೇರಿದ್ದಳು. ದಿನವೂ ಖಾಸಗಿ ಬಸ್ಸಿನಲ್ಲಿ ಶಾಲೆಗೆ ಹೋಗಿಬರುತ್ತಿದ್ದಳು. ಹಿಂದಿನ ಶಾಲೆಯಲ್ಲಿ ಓದಿದ ರೀತಿಯಲ್ಲಿ ಅಲ್ಲಿಯೂ ಸಹ ಓದಿನಲ್ಲಿ ಮುಂದಿದ್ದಳು. ಹುಡುಗಿ ಬಹಳ ಚೂಟಿ ಎಂದು ಹೆಸರು ಮಾಡಿದ್ದಳು. ಎಂಟು ಮತ್ತು ಒಂಬತ್ತನೆಯ ತರಗತಿಯಲ್ಲಿ ಶಾಲೆಗೇ ಮೊದಲಿಗಳಾಗಿ ಪಾಸಾಗಿದ್ದಳು. ಸುತ್ತಮುತ್ತಲಿನ ಹಳ್ಳಿಗಳಿಂದ ಬಹಳಷ್ಟು ವಿದ್ಯಾರ್ಥಿಗಳು ಆ ಶಾಲೆಗೆ ಬರುತ್ತಿದ್ದು, ಜಿಲ್ಲೆಯಲ್ಲಿಯೇ ಆ ಶಾಲೆ ಬಹಳ ಹೆಸರು ಮಾಡಿತ್ತು. ಪ್ರತೀವರ್ಷ ಎಸ್‌ಎಸ್‌ಎಲ್‌ಸಿಯಲ್ಲಿ ಅತ್ಯುತ್ತಮ ಅಂಕ ತೆಗೆದು ತೇರ್ಗಡೆಯಾದವರಿಗೆ ಮಲ್ಲಶೆಟ್ಟಪ್ಪ ಶೀಲ್ಡ್ ಮತ್ತು ಐದು ಸಾವಿರ ರೂ. ಪ್ರಶಸ್ತಿ ದೊರೆಯುತ್ತಿತ್ತು. ಇದರಿಂದಾಗಿ ಜಿಲ್ಲೆಯ ಹತ್ತು ಹಲವು ಕಡೆಗಳಿಂದ ಹಲವಾರು ಮಕ್ಕಳು ಈ ಶಾಲೆಗೆ ಬಂದು ಸೇರುತ್ತಿದ್ದರು. ಪ್ರತೀವರ್ಷ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಸಮೀಪಿಸಿದಾಗ ಈ ಬಾರಿ ಶೀಲ್ಡ್ ಯಾರಿಗೆ ಸಿಗುತ್ತದೆ? ಎಂಬ ಬಗ್ಗೆಯೇ ಎಲ್ಲೆಲ್ಲೂ ಮಾತುಕತೆಗಳಾಗುತ್ತಿದ್ದವು. ಈ ವರ್ಷ ಆ ಶೀಲ್ಡ್ ಸೌಮ್ಯಳದೇ ಎಂದು ಎಲ್ಲರೂ ತೀರ್ಮಾನ ಮಾಡಿದ್ದರು. ಊರಿನಲ್ಲಿ ಎಲ್ಲರೂ ಸೌಮ್ಯಳ ಗುಣಗಾನ ಮಾಡುವಾಗ, ಅವಳೇ ಶಾಲೆಯಲ್ಲೇ ಫಸ್ಟ್ ಎಂದು ಮಾತನಾಡುವಾಗ ರಂಗಮ್ಮನಿಗೆ ಹೃದಯ ತುಂಬಿಬರುತ್ತಿತ್ತು. ಅಂತೂ ದೇವರು ಕಣ್ಣುಬಿಟ್ಟ, ತಾನು ಇಷ್ಟುದಿನ ಕಷ್ಟಪಟ್ಟಿದ್ದಕ್ಕೂ ಸಾರ್ಥಕವಾಯಿತು. ಮಗಳಾದರೂ ಚೆನ್ನಾಗಿ ಓದಿ ಮುಂದೆ ಒಳ್ಳೆಯ ಭವಿಷ್ಯ ರೂಪಿಸಿಕೊಳ್ಳುತ್ತಾಳೆ. ಜೀವನದಲ್ಲಿ ತನ್ನಂತೆ ಕಷ್ಟಪಡಬೇಕಿಲ್ಲ, ಈ ಕಷ್ಟಗಳೆಲ್ಲಾ ತನ್ನೊಂದಿಗೇ ಕೊನೆಯಾಗಲಿ ಎಂದು ರಂಗಮ್ಮ ಆಶಿಸುತ್ತಿದ್ದರೆ; 'ನಾನು ಚೆನ್ನಾಗಿ ಓದಿ, ಒಳ್ಳೆಯ ಕೆಲಸಕ್ಕೆ ಹೋಗಿ ಮುಂದೆ ನಿನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆ' ಎಂದು ಸೌಮ್ಯ ತಾಯಿಗೆ ಭರವಸೆ ತುಂಬುತ್ತಿದ್ದಳು.

ಮಗಳು ಅದೊಂದು ದಿನ ಶಾಲೆಗೆ ಹೋಗುವಾಗ, ಹೇಗೇಗೋ ಆಡಿದಳೆಂದೂ, ಬಸ್ಸಿನಲ್ಲಿ ಪ್ರಜ್ಞೆ ತಪ್ಪಿ ಬಿದ್ದಳೆಂದು ಅವಳನ್ನು ಬಸ್ಸಿನಲ್ಲಿದ್ದ ಸಹಪಾಠಿಗಳು ಕಿರಾಣಿ ಅಂಗಡಿಯ ನವರಂಗಿಯ ಸಹಾಯದಿಂದ ತಂದು ಮನೆಗೆ ಬಿಟ್ಟರು. ಆ ದಿನ ಮಧ್ಯರಾತ್ರಿ ನಿದ್ರೆಯಿಂದ ಕಿರುಚಿಕೊಂಡು ಎದ್ದ ಸೌಮ್ಯ ಮೈಮೇಲೆ ಇರುವೆಗಳು ಓಡಾಡುತ್ತಿವೆಯೆಂದು ಹೇಳುತ್ತಾ ತಾನು ತೊಟ್ಟಿರುವ ಬಟ್ಟೆಗಳನ್ನು ಬಿಚ್ಚಿ ಕೊಡವತೊಡಗಿದಳು. ವಯಸ್ಸಿಗೆ ಬಂದ ಮಗಳು ಹೀಗೆ ನಾಚಿಕೆಬಿಟ್ಟು ಬಟ್ಟೆ ಬಿಚ್ಚಿ ವಿಚಿತ್ರವಾಗಿ ಆಡುತ್ತಿದ್ದಾಳೆಂದು ರಂಗಮ್ಮನಿಗೆ ಆತಂಕವಾಯಿತು. ರಂಗಮ್ಮ ಮಗಳ ಹಾಸಿಗೆ-ಬೆಡ್‌ಶೀಟ್ ಎಲ್ಲವನ್ನೂ ಪರಿಶೀಲಿಸಿ, ಮತ್ತೊಮ್ಮೆ ಕೊಡವಿ, ಇರುವೆಗಳೂ ಇಲ್ಲ, ಏನೂ ಇಲ್ಲ ಎಂದು ತಿಳಿಹೇಳಿ, ತಾನೇ ಅವಳಿಗೆ ಬಟ್ಟೆ ಹಾಕಿ ಮಲಗಿಸಿದಳು. ಆದರೆ ನಿತ್ಯವೂ ಇದು ಪುನರಾವರ್ತನೆಯಾಗತೊಡಗಿತು. ಬುದ್ಧಿ ಹೇಳಿ ಸೋತ ರಂಗಮ್ಮನು ಧ್ವನಿ ಎತ್ತರಿಸಿ, ಬೈದು ಹೇಳಿದರೂ ಮಗಳ ಈ ವರ್ತನೆ ಬದಲಾಗಲಿಲ್ಲ. ಆ ಸಮಯದಲ್ಲಿ ಸೌಮ್ಯಳ ಹಾವಭಾವಗಳು ವಿಚಿತ್ರವಾಗಿರುತ್ತಿದ್ದವು. ಮಾತುಗಳು ಅಸ್ಪಷ್ಟವಾಗಿರುತ್ತಿದ್ದವು. ಕೇಳಿದ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸುತ್ತಿರಲಿಲ್ಲ. ಬೆಳಗಾಗೆದ್ದು ಕೇಳಿದರೆ 'ನನಗೇನೂ ನೆನಪಿನಲ್ಲಿಲ್ಲ' ಎಂದು ಹೇಳುತ್ತಿದ್ದಳು. ಕೆಟ್ಟ ಕನಸುಗಳು ಬೀಳದಿರಲೆಂದು ರಂಗಮ್ಮ ಮಗಳ ತಲೆದಿಂಬಿನ ಕೆಳಗೆ ಮೆಟ್ಟು-ಪೊರಕೆ ಇಟ್ಟಳು. ಶನಿದೇವರ ಪೂಜಾರಿಯಿಂದ ಯಂತ್ರ ತಂದು ಕಟ್ಟಿದಳು. ಹಣೆಗೆ ಯಾವುದೋ ದೇವಿಯ ಮಂತ್ರಿಸಿದ ಕುಂಕುಮ ಇಟ್ಟಳು. ದಂಡಿಮಾರಮ್ಮ, ಆದಿಲಕ್ಷ್ಮಮ್ಮರಿಗೆ ಹರಕೆಹೊತ್ತಳು. ಆದರೂ ಸಮಸ್ಯೆ ಬಗೆಹರಿಯಲಿಲ್ಲ.

'ಯಾಕಪ್ಪಾ ಶಿವ್ನೆ, ನಂಗಿಂತ ಶಿಕ್ಷೆ? ನನ್ನನ್ನು ಇಂಗೆ ಪರೀಕ್ಷೆ ಮಾಡ್ತಾ ಇದೀಯಾ? ಮದುವೆ ಆಗಿ ಬಂದಾಗ್ಲಿಂದ ಕಷ್ಟದಲ್ಲೇ ಕೈತೊಳಿತಾ ಇದೀನಿ. ಮಗಳು ಚೆಂದಾಗಿ ಓದ್ತಾ ಇದಾಳೆ, ಮುಂದೆ ಒಳ್ಳೇ ಕೆಲಸಕ್ಕೆ ಓಗ್ತಾಳೆ ಅಂತೇಳಿ ನೆಮ್ಮದಿ ಪಡೋ ಟೇಮ್‌ಗೆ,